# ಭಾರತೀಪುರ—ಒಂದು ಸಮೀಕ್ಷೆ

ಸಂಸ್ಕಾರವನ್ನು ಬರೆದ ಡಾ॥ ಅನಂತಮೂರ್ತಿಯವರ ಮತ್ತೊಂದು ಕಾದಂಬರಿ ಎಂಬುದರಿಂದಲೇ ಪರ, ವಿರೋಧ ಭಾವನೆಗಳನ್ನು ಕೆರಳಿಸಬಲ್ಲ ಕೃತಿ ಭಾರತೀಪುರ. ಸಂಸ್ಕಾರ ಓದಿ ಸಿಟ್ಟಾದವರು ಮತ್ತಷ್ಟು ಸಿಟ್ಟಾಗಬಹುದಾದ, ಖುಷಿಯಾದವರು ಮತ್ತಷ್ಟು ಖುಷಿಯಾಗಬಹುದಾದ ಕಾದಂಬರಿ ಇದು.

ಭಾರತೀಪುರ ಎಂಬುದು ಅನ್ವರ್ಥನಾಮ : ಪುರದ ಅಳತೆಗೆ ಭಟ್ಟಿ ಇಳಿಸಿದ ಭಾರತ. ಐದೋ ಹತ್ತೋ ಸಾವಿರ ಪ್ರಜಾಸಂಖ್ಯೆಯುಳ್ಳ ನೂರಾರು ಊರುಗಳಲ್ಲಿ ಒಂದು. ಮಾತ್ರವಲ್ಲ, ಅಂಥ ಗಾತ್ರದ ತೀರ್ಥಯಾತ್ರೆಯ ಕೆಲವೇ ಊರುಗಳಲ್ಲಿ ಒಂದೂರು. ಅದು ಹರಿದ್ವಾರ, ನಾಸಿಕ್ ಅಥವಾ ತಿರುಚನಾಪಳ್ಳಿ ಇಂಥ ಯಾವುದಾದರೂ ಆಗಿರಬಹುದು. ಆದರೂ ಈ ಊರುಗಳಿಗಿಂತ ಭಿನ್ನವಾದ ಊರು ಭಾರತೀಪುರ. ಏಕೆಂದರೆ, ಈ ಊರುಗಳಲ್ಲಿ ಈಗ ಒಂದೋ, ಹಲವೋ ಭಾರಿ ಪ್ರಮಾಣ ಕಾರ್ಖಾನೆಗಳಿವೆ. ಅಂತೆಯೇ ಅವು ಯಾವುವೂ ಈಗ "ಭಾರತೀಪುರ" ಆಗಿ ಉಳಿದಿಲ್ಲ. ಅಲ್ಲೆಲ್ಲಾ ಪಾವನವಾದ ನದಿಗಳು, ಮಹಿಮಾಪೂರ್ಣವಾದ ದೇವಸ್ಥಾನಗಳು ಇದ್ದರೂ ಕೂಡ "ಹೊಸ ದೇವಾಲಯ" ಎನ್ನಿಸಿಕೊಂಡ ದೈತ್ಯ ಕಾರ್ಖಾನೆಗಳಿವೆ. ಅಲ್ಲಿ ಮೊಳಗುವ ತುಂಬು ಗಂಭೀರದ ದೇವಾಲಯದ ಘಂಟಾನಾದದ ಜೊತೆಗೆ ಗಾಳಿಯನ್ನು ಸೀಳಿಕೊಂಡು ಬೀರುವ ಕಾರ್ಖಾನೆಯ ಸೀಟಿ ಪೈಪೋಟಿಗೆ ನಿಂತಿದೆ. ಆದುದರಿಂದ ಭಾರತವನ್ನು ಭಾರತೀಪುರವಾಗಿ ಭಟ್ಟಿ ಇಳಿಸುವಾಗ ಡಾ॥ ಅನಂತಮೂರ್ತಿ ಉದ್ದೇಶಪೂರ್ವಕವಾಗಿಯೇ ಅದನ್ನು ಉದ್ಯೋಗೀಕರಣದ ಸೋಂಕು, ಹೊಡೆತಗಳಿಲ್ಲದ ಭಾರತದ ತದ್ರೂಪವಾಗಿ ಇಳಿಸಿದ್ದಾರೆ.

ಈ ನಗರದ ಬಗ್ಗೆ ನಾಲ್ಕಾರು ಮಾತು ಹೇಳುವುದು ಅಗತ್ಯ. ಏಕೆಂದರೆ ಒಂದು ಅರ್ಥದಲ್ಲಿ ಈ ಊರೇ ಕಾದಂಬರಿಯ "ಹೀರೋ".

ಭಾರತೀಪುರ ಇನ್ನೂ ಭಟ್ಟರ ಊರು, ಶೆಟ್ಟರ ಊರು ಆಗಿಲ್ಲ. ಅದರ ಪತಾಕೆ ದರ್ಭೆ : ಸ್ಪ್ಯಾನರ್ ಅಲ್ಲ. ಅಲ್ಲಿ ಅಡಿಕೆ ತೋಟಗಳಿವೆ. ಮಂಡಿಗಳಿವೆ, ಲೇವಾದೇವಿಯಿದೆ, ಗೇಣಿದಾರರಿದ್ದಾರೆ, ಪುರೋಹಿತರಿದ್ದಾರೆ, ಪೂಜಾರರಿದ್ದಾರೆ, ಕಚ್ಚಾ ಕಕ್ಕಸುಗಳಿವೆ, ಪಾಯಿಖಾನೆ ತಲೆ ಮೇಲೆ ಹೊರುವ ಹೊಲೆಯರಿದ್ದಾರೆ. ಕಟ್ಟುನಿಟ್ಟಾದ ಜಾತಿಪದ್ಧತಿಯಿದೆ. ಇಂಥ ಇನ್ನೂ ಹಲವಾರು ಅಂಶಗಳನ್ನು ಒಳಗೊಂಡು ಒಟ್ಟು ಸಮಾಜಪದ್ಧತಿಯಲ್ಲಿ ಕೇಂದ್ರಬಿಂದುವಾದ ಮಂಜುನಾಥಸ್ವಾಮಿಯಿದ್ದಾನೆ ; ಅವನ ಮಹಿಮೆ ಇದೆ. ಎಲ್ಲರನ್ನು, ಎಲ್ಲವನ್ನು ಯಥೋಚಿತ ಸ್ಥಾನದಲ್ಲಿ ನಿಲ್ಲಿಸಿರುವವನು ಅವನು. ಹಿಂದೆ ಈ ಸ್ವಾಮಿಯ ಎಡೆಯಲ್ಲಿ ಕ್ಷುದ್ರ ದೇವತೆಯಾದ ಭೂತರಾಯನಿದ್ದನಂತೆ. ಮಂಜುನಾಥಸ್ವಾಮಿ ಅವನನ್ನು ತನ್ನಲ್ಲಿ ಲೀನಮಾಡಿಕೊಂಡಿದ್ದರೂ ಇನ್ನೂ ಜನರ ಭಯ ಭಕ್ತಿ ಭೂತರಾಯನ ಬಗ್ಗೆ ಹಸಿರಾಗಿಯೇ ಇದೆ. ಮಂಜುನಾಥನ ಮಹಿಮೆ ತನ್ನ ಕೆಲಸ ಮಾಡದ ಪಕ್ಷದಲ್ಲಿ ಭೂತರಾಯನ ಭಯ ಕೆಲಸ ಮಾಡುತ್ತದೆ. ಜನ ಮಂಜುನಾಥಸ್ವಾಮಿಯನ್ನು ನಂಬಿಯೇ ಬದುಕಬೇಕು. "ಶ್ರೀ ಮಂಜುನಾಥಸ್ವಾಮಿ ಸಕ್ಕರೆ ಕಾರ್ಖಾನೆ" ಬರುವ ತನಕ ಅವನದು ಏಕಾಧಿಪತ್ಯ.

ಭಾರತೀಪುರದಲ್ಲಿ ಏನಿವೆ, ಏನಿಲ್ಲ ಎನ್ನುವ ವಿವರಗಳು ಬಹುಮುಖ್ಯ. ಏಕೆಂದರೆ ಕಾದಂಬರಿಯ ಘಟನೆಗಳು ನಡೆಯುವುದು ಈ ಎಲ್ಲಾ ಇವೆ – ಇಲ್ಲಗಳ ಹಿನ್ನೆಲೆಯಲ್ಲಿ. ಈ ಎಲ್ಲಾ ಇವೆ – ಇಲ್ಲಗಳು ಕಾದಂಬರಿಯ ಘಟನೆಗಳನ್ನು ರೂಪಿಸುತ್ತವೆ, ಅವುಗಳ ಅಂತರಾರ್ಥವನ್ನು ನಿರ್ಣಯಿಸುತ್ತವೆ. ಇದನ್ನು ಹೀಗೂ ಹೇಳಬಹುದು. ಮಸಲಾ, ಭಾರತೀಪುರ "ಭಾರತೀಪುರ" ಆಗಿಲ್ಲದಿದ್ದರೆ......ಅಲ್ಲಿ ಒಂದು ಕಾರ್ಖಾನೆ ಇದ್ದಿದ್ದರೆ ? ನೀಲಿ ಆಕಾಶದ ಮುಖಕ್ಕೆ ಹೊಗೆ ಉಗುಳುವ ಚಿಮಣಿಯ, ಕೆಲಸದ ಪಾಳಿಗೆ ಜನರನ್ನು ಕರೆದುಕೊಳ್ಳುವ, ಹೊರದಬ್ಬುವ ಹೆಬ್ಬಾಗಿಲ, ನೀಲಿ ಬಟ್ಟೆ ತೊಟ್ಟು ಟಿಫಿನ್ ಕ್ಯಾರಿಯರ್ ಹಿಡಿದು ಕೆಲಸದಿಂದ ಅಥವ ಕೆಲಸಕ್ಕೆ ಧಾವಿಸುವ ಜನರ ಕಾರ್ಖಾನೆಯನ್ನು ಅಲ್ಲಿ ಸೃಷ್ಟಿಸಿದ್ದರೆ ? ಭಾರತೀಪುರದ ಹೀನದೀನನಾದ ಚಮ್ಮಾರ ಅಲ್ಲಿ ಪ್ರಾಯಶಃ ಕನ್ವೆಯರ್ ಬೆಲ್ಟ್ ಹೊಲಿಯುವ ಕೆಲಸಗಾರನಾಗಿರುತ್ತಿದ್ದ. ದೇವಸ್ಥಾನದ ಪೂಜಾರಿ ಹುಡುಗ ಅವನ ಕೈಕೆಳಗಿನ ಹೆಲ್ಪರ್ ಆಗಿರುತ್ತಿದ್ದ. ಊರಿನ ಮಹಾಪಂಡಿತರಾದ ಶಾಸ್ತ್ರಿಗಳು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರುವ ದುರ್ದೈವದ ಪ್ರಸಂಗ ಬಂದಿದ್ದರೆ, ಅವರ ಕೌಶಲ್ಯಗಳು, ವಿದ್ವತ್ತು ಅಲ್ಲಿ ಯಾವ ಕೆಲಸಕ್ಕೂ ಬರುತ್ತಿರಲಿಲ್ಲ ಎಂದು ಕಂಡುಕೊಳ್ಳುತ್ತಿದ್ದರು. ಅನಿವಾರ್ಯವಾಗಿ ವರು ಕ್ಯಾಂಟೀನಿನಲ್ಲಿ ಅಡಿಗೆಯವನಾಗಿ, ಆಫೀಸು ಜವಾನನಾಗಿ ಇಲ್ಲವೇ ರಾತ್ರಿ

ವಾಚ್‌ಮನ್‌ನಾಗಿ ಮಾತ್ರ ಸೇರಬೇಕಾಗುತ್ತಿತ್ತು. ಅದಕ್ಕಿಂತ ಮುಖ್ಯವಾದ ವಿಷಯವೆಂದರೆ ಈ ಮೂವರೂ ಒಂದೇ ಕ್ಯಾಂಟೀನಿನಲ್ಲಿ ಜೊತೆಗೆ ತಿಂಡಿ ತಿಂದು ಒಂದೇ ಜಯಕಾರ, ಧಿಕ್ಕಾರಗಳನ್ನು ಕೂಗಿ ಒಂದೇ ಸಾಲಿನಲ್ಲಿ ಮೆರವಣಿಗೆ ಹೋಗು ತ್ತಿದ್ದರು. ಮಡಿ, ಮೈಲಿಗೆ, ಜಾತಿಯ ಬದಲು ಗ್ರೇಡಿನ, ಪ್ರಮೋಷನ್ನಿನ, ಬೋನಸ್ಸಿನ ವ್ಯಾಮೋಹ ಅವರ ತಲೆಗೆ ಹೆಚ್ಚು ಹತ್ತುತ್ತಿತ್ತು. ಕಾರ್ಖಾನೆಯ ಮ್ಯಾನೇಜರರು, ದೇವಸ್ಥಾನದ ಮಹಂತರು ಎಂದೂ ಕಂಡು ಕೇಳದಷ್ಟು ಅಧಿಕಾರ ವೈಭವಗಳಲ್ಲಿ ಓಲಾಡುತ್ತಿದ್ದರು. ನಗರದ ಮೇಲೆ ತಮ್ಮ ಪ್ರಭಾವ ಬೀರುತ್ತಿದ್ದರು. ಮಂಜುನಾಥನ ಮಹಿಮೆ ಸ್ವಲ್ಪ ಕಡಿಮೆಯಾಗಿ, ನಗದಿನ ಮಹಿಮೆ ಸ್ವಲ್ಪ ಜಾಸ್ತಿ ಯಾಗುತ್ತಿತ್ತು. ಇದು ಕೇವಲ ವಾಕ್ಚಾತುರ್ಯದ ಮಾತಲ್ಲ ಎನ್ನುವುದನ್ನು ಸಾಬೀತು ಮಾಡಲು ಒಂದು ಉದಾಹರಣೆ ಸಾಕು. ಇಡೀ ದೇಶದ ಸಕ್ಕರೆ ಉದ್ಯಮದಲ್ಲಿನ ಎಲ್ಲ ನೌಕರಿಗಳನ್ನು ಮೌಲ್ಯಮಾಪನ ಮಾಡಿದ ಸಕ್ಕರೆ ಉದ್ಯೋಗ ವೇತನ ಮಂಡಲಿ, ಮೋಚಿಯನ್ನು ಅರೆ ಕುಶಲ ಕೆಲಸಗಾರನೆಂತಲೂ, ಸಕ್ಕರೆ ಕಾರ್ಖಾನೆಗಳಿಗೆ ಹೊಂದಿ ಕೊಂಡಿರುವ ದೇವಸ್ಥಾನಗಳ ಪೂಜಾರಿಯನ್ನು ಅಕುಶಲ ಕೆಲಸಗಾರನೆಂತಲೂ ನಿರ್ಧ ರಿಸಿದೆ. ಇಲ್ಲಿ ಔದ್ಯೋಗೀಕರಣವೇ ಆಧುನೀಕರಣವೆಂದಾಗಲಿ, ಅಥವಾ ನಗರೀ ಕರಣ ಇಂಥ ಜಟಿಲ ಸಮಸ್ಯೆಗಳನ್ನು ತಂತಾನೆ ನೇರವಾಗಿ ಬಗೆಹರಿಸುತ್ತದೆಂದಾಗಲಿ, ಸರಳೀಕರಿಸುವುದು ಉದ್ದೇಶವಲ್ಲ. ಏಕೆಂದರೆ ಭಾರತದ ಅತಿ ದೊಡ್ಡ ನಗರ ವಾದ ಕಲ್ಕತ್ತದಲ್ಲಿ ಕಾಳಿಗುಡಿ ಇನ್ನೂ ಖಾಲಿ ಆಗಿಲ್ಲ. ಉದ್ಯೋಗಗಳು ಆಧುನೀ ಕರಣದ ಅನಿವಾರ್ಯ ಅಂಗವಾಗಿದೆ ಎಂದಷ್ಟೆ ಸ್ಪಷ್ಟೀಕರಿಸಲು ಇದೆಲ್ಲಾ ಹೇಳಲಾಗಿದೆ. ಜಗನ್ನಾಥ ಸ್ವತಃ ಉಂಟುಮಾಡಬೇಕಾಗಿರುವ ಅಲ್ಲೋಲ ಕಲ್ಲೋಲವನ್ನು, ಅವನು ಮಂಜುನಾಥ ಸ್ವಾಮಿಗೆ ತನ್ನ ಯಥೋಚಿತ ಮೂಲೆ ತೋರಿಸಬೇಕಾದುದನ್ನು, ಹೊಲೆಯನ ಮನಸ್ಸಿನಲ್ಲಿ ಹೊಸ ಲಾಲನೆಗಳನ್ನು ಹುಟ್ಟಿಸುವುದನ್ನು ಕಾರ್ಖಾನೆ ಇದ್ದಿದ್ದರೆ ಅದು ಮಾಡುತ್ತಿತ್ತು. ಭಾರತೀಪುರದಲ್ಲಿ ಈ ಅಭಾವ ನಾಯಕನ ಸಮಸ್ಯೆಯ ಒಂದು ಮುಖ್ಯ ಆಯಾಮ.

ವಸ್ತುಸ್ಥಿತಿಯ ಮಟ್ಟದಲ್ಲಿ, ಕಾದಂಬರಿಯ ಮುಖ್ಯ ಗೊಡವೆ ಸಂಪ್ರದಾಯ ಬದ್ಧ ಸಮಾಜದ ಆಧುನೀಕರಣ: ಆ ಸಮಾಜದ ಮೂರ್ತ, ಅಮೂರ್ತ ಸಂಕೇತ ಗಳನ್ನು ತೊಡೆದು ಹಾಕುವುದು, ಕನಿಷ್ಟ ಅವುಗಳನ್ನು ಅಪಮೌಲ್ಯಗೊಳಿಸುವುದು, ಹೊಸ ವಸ್ತುಸ್ಥಿತಿಯನ್ನು, ಮೌಲ್ಯಗಳನ್ನು ನಿರ್ಮಿಸುವುದು. ವ್ಯಕ್ತಿಸ್ಥಿತಿಯ ಮಟ್ಟದಲ್ಲಿ ಅದರ ಮುಖ್ಯ ಗೊಡವೆ ಬ್ರಾಹ್ಮಣ ಜಮೀನ್ದಾರರ ಕುಟುಂಬದಲ್ಲಿ ಹುಟ್ಟಿದ ಧೀಮಂತನೊಬ್ಬ ತನ್ನ ಜಾತಿ ಹಾಗೂ ವರ್ಗಗಳಿಂದ ಮುಕ್ತನಾಗಿ ತನ್ನ ವರ್ಗ–ಜಾತಿಯ ಶೋಷಣೆಗೆ ಗುರಿಯಾಗಿದ್ದ ದಲಿತರ ಜೊತೆಗೆ ಏಕೀಭಾವ ಸಾಧಿಸು ವುದರ ಸಂಕಟ. ಈ ಎರಡೂ ಗೊಡವೆಗಳನ್ನು ಹಾಸುಹೊಕ್ಕಾಗಿ ಮೈತುಂಬಿಸಿ

ಕೊಂಡ ಈ ಕಾದಂಬರಿ ಅತ್ಯಂತ ಅರ್ಥವತ್ತಾದ ವಿವರಪೂರ್ಣವಾದ ಕಥೆಯನ್ನು ನೇಯುತ್ತದೆ.

ಈ ಗೊಡವೆಗಳ ಸುತ್ತ ಹೆಣೆದ ಕಥೆ ಸಾಕಷ್ಟು ಸರಳವಾಗಿದೆ. ಭಾರತೀಪುರದ ಬ್ರಾಹ್ಮಣ ಜಮೀನ್ದಾರರ ಒಬ್ಬನೇ ಮಗ ಜಗನ್ನಾಥ ಇಂಗ್ಲೆಂಡಿನಲ್ಲಿ ಕಲಿತು ತನ್ನ ಊರಿಗೆ ಹಿಂತಿರುಗುವಾಗ ಒಬ್ಬ ವಿಚಾರವಂತ ಮಾತ್ರವಲ್ಲ, ತನ್ನ ವಿಚಾರಶೀಲ ಸಂಬುಗೆಗಳಂತೆ ನಡೆಯಲೂ ಕೂಡಾ ತುಂಬಾ ಪ್ರತಿಬದ್ಧನಾಗಿರುತ್ತಾನೆ. ತನ್ನ ವಿಚಾರಗಳಂತೆ ನಡೆಯುವುದು, ಯಾವುದನ್ನೂ ಯಾರನ್ನೂ ಪರೀಕ್ಷಿಸದೇ ಪ್ರಮಾಣವೆಂದು ಒಪ್ಪದಿರುವುದು, ತನ್ನೆಲ್ಲಾ ಕ್ರಿಯೆಗಳ ಜವಾಬ್ದಾರಿಗಳನ್ನು ತಾನೇ ವಹಿಸಿಕೊಳ್ಳುವುದು, ಅವನು ಇಂಗ್ಲೆಂಡಿನಲ್ಲಿ ರೂಪಿಸಿಕೊಂಡ ವ್ಯಕ್ತಿತ್ವದ ತಿರುಳು. ಆದರೆ ಆತ ಈ ನಿಟ್ಟಿನಲ್ಲಿ ಇಡುವ ಪ್ರತಿ ಹೆಜ್ಜೆಗೂ ತನ್ನ ಸುತ್ತಲಿನ ವಾಸ್ತವಿಕ ಸ್ಥಿತಿ ಅಡಚಣೆಯಾಗುತ್ತದೆ. ಈ ಪರಿಸ್ಥಿತಿಯಲ್ಲಿ ಆತ ಈ ಇಡೀ ಸ್ಥಿತಿ, ಮೌಲ್ಯಗಳ ವಿರುದ್ಧ ಸೆಟೆದು ನಿಲ್ಲುವ ಒಂದು ಭಂಗಿಯಾಗಿ, ತನ್ನೂರಿನ ಒಂದು ಹೊಲೆಯ ಯುವಕರ ತಂಡವನ್ನು ಮಂಜುನಾಥನ ದೇವಸ್ಥಾನದ ಒಳಗೆ ಕರೆದೊಯ್ಯಲು ನಿರ್ಧರಿಸಿ ತಯಾರು ಮಾಡತೊಡಗುತ್ತಾನೆ. ಈ ಹೊಲೆಯರಲ್ಲಿ ಬಂಡಾಯದ ಮನೋವೃತ್ತಿಯನ್ನು ಹುಟ್ಟುಹಾಕಲು, ಅವರಲ್ಲಿ ಜಾಗೃತಿ ಮೂಡಿಸಿ ಮನುಷ್ಯರಾಗಲು ನೆರವಾಗುವ ಮೂಲಕ ತನ್ನ ಸ್ವಾತಂತ್ರ್ಯವನ್ನು ರೂಢಿಸಿಕೊಳ್ಳಲು, ಊರಿನಲ್ಲಿ ಆಧುನೀಕರಣದ ಒಂದು ಕಿಡಿ ಹೊತ್ತಿಸಲು ಅತ್ಯಂತ ತೀವ್ರತೆಯಿಂದ ಪ್ರಯತ್ನಿಸುತ್ತಾನೆ. ಇದರ ಪರಿಣಾಮವೆಂದರೆ ತನ್ನ ಬಂಧುಬಾಂಧವರಿಂದ ತಾನು ದೂರವಾಗುವುದು, ಊರಿನ ಯಾವತ್ತೂ ಕುಲೀನರಿಂದ ಬಹಿಷ್ಕೃತನಾಗುವುದು. ಆದರೂ ಯಾವ ಹೊಲೆಯರ ಸಲುವಾಗಿ ತಾನು ಇದೆಲ್ಲಾ ಮಾಡತೊಡಗುತ್ತಾನೋ ಅವರೊಡನೆ ಆತ್ಮೀಯತೆ ಏಕೀಭಾವ ಅವನು ಸಾಧಿಸಲಾರ. ಅವರು ಜಾಗೃತರಾಗುವುದಿಲ್ಲ ; ಕಡೆಗೆ "ಮಾತನಾಡುವುದೂ" ಇಲ್ಲ. ಪರಿಣಾಮವಾಗಿ ವಾತಾವರಣ ಕದಡುತ್ತದೆ ; ಕಲುಷಿತವಾಗುತ್ತದೆ. ಈ ನಡುವೆ ಸನಾತನ ಕಿಡಿಗೇಡಿಯೊಬ್ಬ ಹರಿಜನರ ಗುಡಿಸಲುಗಳಿಗೆ ಬೆಂಕಿ ಹೊತ್ತಿಸುತ್ತಾನೆ. ಒಬ್ಬ ಹೊಲೆಯ ಯುವಕನ ವಿರುದ್ಧ ಪೋಲೀಸರ ಅತ್ಯಾಚಾರ ನಡೆಯುತ್ತದೆ. ಅತ್ಯಂತ ನಿರಾಶಾದಾಯಕ ಸ್ಥಿತಿ ಏರ್ಪಡುತ್ತದೆ. ಆಗ ಸ್ಥಿತಿಯನ್ನು ಏನಾದರೂ ಮಾಡಿ ಗತಿಶೀಲವಾಗಿಸಲು ಇಡೀ ಹಳೆಯ ಸಂಬುಗೆಗಳ ಹಂದರಕ್ಕೆ ಸಿಡಿಮದ್ದಿಡಲು ಆತ ನಾಟಕೀಯವಾದ ಒಂದು ಚಮತ್ಕೃತಿ ಆರಿಸುತ್ತಾನೆ. ತನ್ನ ಮನೆಯ ಅತ್ಯಂತ ಪವಿತ್ರ ಪೂಜಾವಸ್ತುವಾದ ನರಸಿಂಹ ಸಾಲಿಗ್ರಾಮವನ್ನು ತಂದು ಹೊಲೆಯರನ್ನು ಅದನ್ನು ಮುಟ್ಟುವಂತೆ ಕಾಡಿ ಬೇಡಿ ಮುಟ್ಟಿಸುತ್ತಾನೆ. ಪರಿಸ್ಥಿತಿ ಮತ್ತಷ್ಟು ಕೆಡುತ್ತದೆ. ಅತ್ಯಂತ ಗೊಂದಲದ, ವಿರೋಧದ ನಡುವೆ ಆತ ಹೊಲೆಯರನ್ನು ದೇವಸ್ಥಾನಕ್ಕೆ ಕರೆಯೊಯ್ಯುತ್ತಾನೆ; ದೇವಾಲಯದ ಪ್ರವೇಶ ಶಾಸ್ತ್ರ ಆಗು

ತ್ತದೆ. ಆದರೆ ಸನ್ನಿ ಹಿಡಿದ ದೇವಸ್ಥಾನದ ಪೂಜಾರಿ ಹುಡುಗ ಹಿಂದಿನ ದಿನ ಕಳ್ಳತನದಿಂದ ದೇವರ ವಿಗ್ರಹವನ್ನು ಕಿತ್ತು ಹೊಳೆಗೆ ಎಸೆದಿರುತ್ತಾನೆ. ಆದುದರಿಂದ ದೇವರಿಲ್ಲದ ದೇವಸ್ಥಾನಕ್ಕೆ ಹೊಲೆಯರು ಪ್ರವೇಶಿಸುತ್ತಾರೆ. ಭಕ್ತರು ಹೊಲೆಯರ ಪ್ರವೇಶದಿಂದ ದೇವರು ಅಪವಿತ್ರನಾಗುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಮಂಜುನಾಥಸ್ವಾಮಿ ಮೆರೆದ ಪವಾಡ ಇದು ಎಂದು ಅವನ ಮಹಿಮೆಯನ್ನು ಕೊಂಡಾಡುತ್ತಾರೆ. ಆದರೂ ಪರಂಪರಾಗತ ನಂಬಿಕೆಗಳ, ಚೌಕಟ್ಟಿನ ತಳಹದಿ ಅಲುಗಿದೆ. ಪ್ರಶಾಂತ "ಗಂಗಾಮಾಯಿಗೆ" ಕಲ್ಲು ಹಾಕಿದ್ದಾಗಿದೆ.

ಕಥೆಯ ಮುಖ್ಯ ಅಂಶಗಳು ಇವು: ದೇವಸ್ಥಾನದ ಮೇಲೆ ಪೂರಾ ಆಧರಿಸಿದ, ಪಾಚಿ ಕಟ್ಟಿ ಕೊಳೆತು ನಿಂತ ಗಂಗಾಮಾಯಿ ನೀರಿನಂತಹ ಜನಜೀವನ; ಪ್ರಜಾವಾತ್ಸಲ್ಯದ ಮುಖವಾಡ ಹೊತ್ತ ಜಮೀನ್ದಾರಿ ಸುಲಿಗೆ; ದಮನಕಾರರು, ದಮನಕ್ಕೆ ಈಡಾದವರು ಇಬ್ಬರೂ ದೈವ ನಿಯಾಮಕ, ಚಿರಂತನ ಎಂದು ನಂಬಿದ ಜಾತಿ ಕಟ್ಟುಪಾಡು; ಸ್ವಾತಂತ್ರ್ಯೋತ್ತರದ ಭ್ರಷ್ಟ, ಧೂರ್ತ ರಾಜಕೀಯ ಮುಖಂಡರು ; ಬರಡು ಗಾಂಧಿವಾದ, ಬಾಲಿಶಃ ಸಮಾಜವಾದ; ವಿದೇಶದಲ್ಲಿ ಕಲಿತು, ಆಧುನೀಕರಣ ಪ್ರಕ್ರಿಯೆಯನ್ನು ಮುಂದಲೆ ಹಿಡಿದಾದರೂ ಎಳೆತರಲು ನಿರ್ಧರಿಸುವ ಜಮೀನ್ದಾರ ಮನೆತನದ ಯುವಕ; ಮೇಲಿನಿಂದ ದೊರೆವ ಈ ಪ್ರೇರಣೆಗೆ ಓಗೊಡಲಾರದ, ಜಾಗೃತಿವಿಹೀನರಾದ ದಲಿತರು: ಈ ಪ್ರಕ್ರಿಯೆಗೆ ವಿವಿಧ ರೀತಿಯಲ್ಲಿ ಪ್ರತಿಕ್ರಿಯೆ ತೋರುವ ನಾನಾ ವ್ಯಕ್ತಿಗಳು.

ಭಾರತೀಪುರವನ್ನು ಸಂಸ್ಕಾರಕ್ಕೆ ಹೋಲಿಸುವ ಚಪಲ ಸ್ವಾಭಾವಿಕ. ಎರಡೂ ಕಾದಂಬರಿಗಳು ಆಧುನೀಕರಣವನ್ನು ಅನ್ವೇಷಿಸುತ್ತವೆ; ಶೋಧಿಸುತ್ತವೆ. ಆದರೂ ಸಂಸ್ಕಾರದ ಗೊಡವೆ ಹೆಚ್ಚು ವ್ಯಕ್ತಿಯೊಡನೆ. ಭಾರತೀಪುರದ ವ್ಯಕ್ತಿಯನ್ನೂ, ವಸ್ತುಸ್ಥಿತಿಯನ್ನೂ ಸಮಸಮವಾಗಿ ಅನ್ವೇಷಿಸಿ ಶೋಧಿಸುತ್ತದೆ.

ಸಂಸ್ಕಾರದಲ್ಲಿ ಪ್ರಜ್ಞೆ ಕತ್ತಲಿನಿಂದ ಬೆಳಕಿಗೆ ಹೋಗುತ್ತದೆ: ಭಾರತೀಪುರದಲ್ಲಿ ಬೆಳಕಿನಿಂದ ಕ್ರಿಯೆಗೆ ಹೋಗುತ್ತದೆ. ಮಾತ್ರವಲ್ಲ, ಭಾರತೀಪುರದಲ್ಲಿ, ಸಂಸ್ಕಾರದಲ್ಲಿ ಕಾಣಸಿಗದ ಸಮಾಜ ಶಾಸ್ತ್ರದ ದೃಷ್ಟಿಯಿಂದ ಅರ್ಥಪೂರ್ಣವಾದ ಅಸಂಖ್ಯ ಇಣುಕು ನೋಟಗಳಿವೆ. ಘಟನಾಚಕ್ರವನ್ನಷ್ಟೇ ಅಲ್ಲದೇ, ತರ್ಕಚಕ್ರವನ್ನೂ ಮನೋವ್ಯಾಪಾರವನ್ನೂ ಕೂಡಾ ಈ ಕಾದಂಬರಿ ನಿರ್ದಯವಾಗಿ ಎಳೆಎಳೆಯಾಗಿ ಬಿಡಿಸಿ ಬಯಲಿಗಿಡುತ್ತದೆ.

ಕಾದಂಬರಿಯ ಬೆಳವಣಿಗೆಯ ಘಟನಾಚಕ್ರದ ಚಲನೆಯ ಮುಖ್ಯ ಅಶ್ವಶಕ್ತಿ ಜಗನ್ನಾಥನ ಪ್ರಜ್ಞೆ ಹಾಗೂ ವಸ್ತುಸ್ಥಿತಿಗಳ ನಡುವೆ ತಾಳಮೇಳವಿಲ್ಲದಿರುವುದು,

ನಿಲ್ಲಲು ಆಪರೇಷನಲ್ ಬೇಸ್ಐ ಇಲ್ಲದೆ ಆತ ಚಲನೆಗೆ ತೊಡಗಬೇಕಾಗಿದೆ.
ಇಲ್ಲಿಯೇ ಅನಂತಮೂರ್ತಿಯವರು ಆರಿಸಿಕೊಂಡಿರುವ ಭಾರತೀಪುರದ ನಗರಲಕ್ಷಣ
ವಿಶೇಷ ಮಹತ್ವ ಪಡೆಯುತ್ತದೆ. ಅವರಿಗೆ ಪ್ರಿಯವಾದ ಮಾತುಗಳಲ್ಲಿ ಹೇಳ
ಬೇಕಾದರೆ ಪರಿಸರದ ನೆರವಿಲ್ಲದೆ ಪ್ರಜ್ಞೆ ಇಲ್ಲಿ ಮುನ್ನಡೆಯಬೇಕಾಗುತ್ತದೆ.
ಈ ಪ್ರಶ್ನೆಗೆ ದಾರ್ಶನಿಕ ಆಯಾಮವಿದೆ. ಯಾವುದು ಪ್ರಬಲ ಮನೋನಿರ್ಧಾರವೋ·
ಪರಿಸರವೋ ? ಅವುಗಳ ಪರಸ್ಪರ ಸಂಬಂಧ ಎಂಥದ್ದು ?

ಆ ಊರಿನಲ್ಲಿ ಹುಟ್ಟಿದವನಾದರೂ ಜಗನ್ನಾಥ ತನ್ನೂರಿನಲ್ಲಿಯೇ ಪೂರಾ
ಪರಕೀಯ. ಇಂಗ್ಲೆಂಡಿನಲ್ಲಿರುವ ಇಂಗ್ಲೀಷ್ ಗೆಳತಿಯೊಡನೆ ತನ್ನ ತೊಳಲಾಟ
ವನ್ನು ಮನಬಿಚ್ಚಿ ಕಾಲ್ಪನಿಕವಾಗಿ ತೋಡಿಕೊಳ್ಳುತ್ತಾನೆ. ತನ್ನೂರಿಗೆ ಹೊರಗಿನಿಂದ
ಬಂದ ಮೊದಲ ಪರಿಚಯದ ಒಬ್ಬ ರಾಜಕೀಯ ಕಾರ್ಯಕರ್ತನೊಡನೆಯೂ ಆತ
ಮಾತನಾಡಬಲ್ಲ. ಆದರೆ ಆತನನ್ನು ಅರ್ಥಮಾಡಿಕೊಳ್ಳಬಲ್ಲವರು ಆ ಊರಿನಲ್ಲಿ
ಯಾರೂ ಇಲ್ಲ. ಕಡೆಗೆ ಅವನು ಬಂಡಾಯಕ್ಕೆ ಅಣಿ ಮಾಡುತ್ತಿರುವ ಹೊಲೆ
ಯರೂ ಕೂಡಾ. ಕಡೆಗೆ ಆಧುನೀಕರಣ, ರೈತರ ಹೋರಾಟ, ಗಣಿಗಾರಿಕೆ, ಕೈಗಾರಿಕೆ
ಗಳ ಮುಖಾಂತರ ಬರುತ್ತದೆಂದು ಆತ ಅರಿಯುತ್ತಾನೆ. ಆದರೂ ಮನುಷ್ಯ ಬದ
ಲಾಗದಿದ್ದರೆ, ಬಾಕಿ ಎಲ್ಲವೂ ಮೇಲೆ ಮೇಲಿನ ಬದಲಾವಣೆಯೋ ಎಂದೂ ಶಂಕಿಸು
ತ್ತಾನೆ. ಆದರೆ ಮನಸ್ಸನ್ನು ವಿಮುಕ್ತಗೊಳಿಸುವ ಕರ್ತವ್ಯವನ್ನು ಆತ ಪೂರ್ವಭಾವಿ
ಯಾಗಿ ಆರಿಸಿಕೊಂಡಿದ್ದಾನೆ. ಅದಕ್ಕಾಗಿಯೇ ದಾಸ್ಯದ ಚಿಹ್ನೆಯಾದ ದೇವಾಲಯದ
ಮೇಲೆ ಆತನ ದಾಳಿ. ಹೀಗಾಗಿ ಆತನ ಕ್ರಾಂತಿ ದರ್ಬಾರಿ ಕ್ರಾಂತಿ ಆಗುತ್ತದೆ —
ಜನತಾ ಕ್ರಾಂತಿ ಅಲ್ಲ. ಅವನ ಎಲ್ಲಾ ಸಂಕಟದ ಮೂಲ ಕೂಡಾ ಇದೇ : ಪ್ರಜ್ಞೆ
ಮತ್ತು ಪರಿಸರದ ನಡುವೆಯೇ ವಿರಸ. ಕಡೆಗೆ, ಪರಿಣಾಮ ವಿಕೃತವಾಗುವ ಸಂಭವದ
ಮೂಲ ಕೂಡಾ ಇದೇ.

ಭಾರತೀಪುರ, ಸೃಷ್ಟ್ಯಾತ್ಮಕ ಬರಹಗಾರನೊಬ್ಬ ಕಂಡ ಆಳವಾದ ಒಂದು
ವಿರಸದ ಸಮಗ್ರ ಪರಿಕಲ್ಪನೆಯ ಅಸಲು ಚಿತ್ರ. ಮೌಲ್ಯಗಳ, ಕಟ್ಟಡಗಳ, ವ್ಯಕ್ತಿ
ಗಳ ನಡುವಣ ಈ ವಿರಸಕ್ಕೆ ಸಾಹಿತ್ಯಕವಾದದ್ದೇ ಅಲ್ಲದೇ, ಬಹುಬಾರಿ ಸಮಾಜ
ಶಾಸ್ತ್ರದ್ದು ಹಾಗೂ ಒಮ್ಮೊಮ್ಮೆ ದಾರ್ಶನಿಕವಾದದ್ದೂ ಆದ ಆಯಾಮವೂ ಉಂಟು.
ಈ ಕಾದಂಬರಿಯ ಎಲ್ಲ ಪ್ರಮುಖ ಅಂಶಗಳನ್ನು ಉಲ್ಲೇಖಿಸುವುದು ಅಸಾಧ್ಯವಾದರೂ
ಅದರ ಪರಿಕಲ್ಪನೆಯ ವಿಸ್ತಾರವನ್ನೂ, ಆಳವನ್ನೂ ಸೂಚಿಸಬಲ್ಲ ಕೆಲ ಅಂಶಗಳನ್ನು
ಮಾತ್ರ ಗಮನಿಸಬೇಕು.

ಈ ಕಾದಂಬರಿಯ ಅತ್ಯುತ್ತಮ ಭಾಗ ಜಗನ್ನಾಥ ಹೊಲೆಯರನ್ನು ಸಾಲಿ
ಗ್ರಾಮ ಮುಟ್ಟುವಂತೆ ಮಾಡುವುದು. ಒಂದು ವ್ಯಾಪಕ ಅರ್ಥದಲ್ಲಿ ಅದರ ತಿರುಳು

ಕೂಡಾ ಇಲ್ಲಿದೆ. ಇಲ್ಲಿ ಕಾದಂಬರಿ ಹಲವು ಸ್ತರಗಳಲ್ಲಿ ಹರಿಯುತ್ತದೆ. ಊರಿನ ಪ್ರತಿಷ್ಠಿತ ಶ್ರೀಮಂತ ಬ್ರಾಹ್ಮಣ ಕುಟುಂಬದ ವಾರಸುದಾರ ಇಲ್ಲಿ, ತನ್ನ ಮನೆತನದ ಹೊಲೆ ಆಳುಗಳ ಕೈಯಿಂದ ತನ್ನ ಮನೆತನಕ್ಕೆ ಅತ್ಯಂತ ಪವಿತ್ರವೆನಿಸಿ, ಸಾವಿರ ವರುಷದಿಂದ ಪೂಜೆಗೊಂಡ ನರಸಿಂಹ ಸಾಲಿಗ್ರಾಮವನ್ನು ಮುಟ್ಟಿಸಹೋಗುತ್ತಾನೆ. ಏಕೆಂದರೆ, ಈ ಎಲ್ಲಾ ಧರ್ಮ-ಜಾತಿಗಳ ನಿಗೂಢ ರಹಸ್ಯಗಳ ಅಭಿನ್ನ ಅಂಗವಾದ ಇದು ಕೇವಲ ಒಂದು ಕಲ್ಲು ಎಂಬುದನ್ನು ಅವರು ಮನಗಾಣಬೇಕು. ಅದನ್ನು ಮುಟ್ಟುವಂತೆ ಅವನು ಅವರನ್ನು ಗೋಗರೆಯುತ್ತಾನೆ. ಉಹುಂ. ಅವರು ಹೆದರಿ ಕಂಗಾಲಾಗಿ ಹಿಂತೆಗೆಯುತ್ತಾರೆ. ಅವನು ತಾಳ್ಮೆಗೆಡುತ್ತಾನೆ. ಅದನ್ನು ಮುಟ್ಟುವಂತೆ ಅವನು ಅವರಿಗೆ ಜಬರಿಸುತ್ತಾನೆ. ಆಗ ಹೆದರಿ ಮುಟ್ಟುವ ಶಾಸ್ತ್ರ ಮಾಡುತ್ತಾರೆ. ರಾಜಕಾರಣದ ಒಂದು ಚಿರ ದುರಂತ ಇದು. ಎಲ್ಲಾ ಕ್ರಾಂತಿಗಳೂ ಜನರ ಮನ ಒಲಿಸಿ ಪ್ರಾರಂಭವಾಗುತ್ತವೆ. ಕಡೆಗೆ ಒಂದು ಘಟ್ಟದಲ್ಲಿ ಅವರಿಗೆ ಆಜ್ಞೆ ನೀಡ ಬೇಕಾಗುತ್ತದೆ – ಅವರ ಒಳಿತಿಗಾಗಿಯೇ.

ಈ ಘಟನೆಯ ಇನ್ನೊಂದು ಆಯಾಮ ಇದು: ಜಗನ್ನಾಥ ವರ್ಗಮುಕ್ತ ನಾಗುವ ಸಂಕಟ. ಜಗನ್ನಾಥನ ಈ ಸಂಕಟ ತುಂಬಾ ವಾಸ್ತವಿಕವಾದದ್ದು. ಮನುಷ್ಯನನ್ನು ಮೇಲೆತ್ತುವಂಥದ್ದು; ಇತಿಹಾಸಕ್ಕೆ ತುಂಬಾ ಅಗತ್ಯವಾದದ್ದು. ಒಂದು ಆಳುವ ವರ್ಗ ಅಥವಾ ಜಾತಿಯಲ್ಲಿ ಹುಟ್ಟಿ, ಅದರ ಸಂಸ್ಕಾರದಲ್ಲಿ ಪಳಗಿ ದವನು ತದ್ವಿರುದ್ಧವಾದ ಮೌಲ್ಯಗಳಿಗೆ ಮಾರುಹೋಗಿ ತನ್ನ ಪ್ರಜ್ಞೆಯಲ್ಲಿಯೇ ಕ್ರಾಂತಿಗೆ ಒಳಗಾದವನು. ತನ್ನ ಒಳಗುಹೊರಗುಗಳ ನಡುವೆ ಸಾಮರಸ್ಯ ಸಾಧಿಸುವ ತೊಳಲಾಟದ ಸಂಕಟ ಇದು. ತನ್ನ ವರ್ಗ ಅಥವಾ ಜಾತಿಯಿಂದ ಅವನು ಮುಕ್ತನಾಗಿ ಬೇರೆ ಜಾತಿ ಅಥವಾ ವರ್ಗದೊಡನೆ ಪೂರ್ತಿಯಾಗಿ ಮಿಳಿತ ವಾದರೆ ಮಾತ್ರ ಈ ಸಂಕಟದಿಂದ ಪೂರ್ತಿ ಮುಕ್ತನಾಗಲು, ಅಂತಶ್ಕ್ರಾಂತಿ ಸಾಧಿಸಲು ಸಾಧ್ಯ. ಹೀಗೆ "ಡಿ ಕ್ಲಾಸಾ"ಗುವ ಬಹು ಮುಖ್ಯ ಸಮಸ್ಯೆಯನ್ನು ಜಗನ್ನಾಥ ಎದುರಿಸುತ್ತಾನೆ. ಅವನ ಪ್ರಜ್ಞೆ ಕೂಡ ಇಲ್ಲಿನ ಪರಿಸರಕ್ಕೆ ಪರಕೀಯವಾಗಿ ಅವನಿಗೆ ಸಾಧಕವಾದ ಅಂಶಗಳೇ ಇಲ್ಲ. ಅಂತೇ ತೊಳಲಾಟ ಇನ್ನಷ್ಟು ವ್ಯಗ್ರ ವಾಗುತ್ತದೆ. ಅವನ ವಿವೇಕಕ್ಕೆ ಅದಷ್ಟೂ ಹತ್ತಿರವಾದ ಶ್ರೀಪತಿರಾಯರು, ಅವನನ್ನು ತುಂಬಾ ಪ್ರೀತಿಸುವ ಅವನ ಚಿಕ್ಕಿ ಕೂಡಾ ಅವನನ್ನು ಅರ್ಥಮಾಡಿ ಕೊಳ್ಳುವುದಿಲ್ಲ. ಅವನು ಎತ್ತಿ ನಿಲ್ಲಿಸ ಬಯಸುವ ಹೊಲೆಯರೂ ಮೂಕರಾಗಿ ದೂರ ನಿಲ್ಲುತ್ತಾರೆ. ಮುಂದೆ ಎಂದಾದರೂ ಅವನನ್ನು ಪೂರ್ಣವಾಗಿ ಸ್ವೀಕರಿಸಿ ಯಾರೇ ಅಥವಾ ಅವನು ಪೂರ್ಣ ಸ್ವೀಕಾರಾರ್ಹನಾದಾನೇ ಎಂಬುದು ಅನುಮಾನ. ಇವತ್ತು ಅವನದು ತ್ರಿಶಂಕು ಸ್ಥಿತಿ. ಈ ಅಸಹನೀಯವಾದ ದುಃಖದ ನಿರಂತರತೆ ಯನ್ನು ಅನಂತಮೂರ್ತಿ ಇಲ್ಲಿ ಚಿತ್ರಿಸಿದ್ದಾರೆ. ಶರತ್‌ಚಂದ್ರರ 'ಪಥೇರ್ ದಾಬಿ'